# ಈ ಲಂಬೂಜಿ!



ಈ ಚಿತ್ರದಲ್ಲಿರುವ ವ್ಯಕ್ತಿಯ ಹೆಸರು ಪೊಲ್ಲಿಪಾಕ ಗಟ್ಟಯ್ಯ. ಬರೋಬ್ಬರಿ ಏಳು ಇಂಚು ಆರು ಅಡಿ ಎತ್ತರವಿರುವ ಈತ ಭಾರತದ ಅತೀ ಎತ್ತರದ ವ್ಯಕ್ತಿ! ಹೈದರಾಬಾದ್ ಬಳಿಯ ಶಿಲ್ಪಾರಾಮಂನ ಗ್ರಾಮೀಣ ವಸ್ತುಸಂಗ್ರಹಾಲಯದ ಉದ್ಯೋಗಿ.

ಕರೀಂನಗರ್ ಜಿಲ್ಲೆಯ ಪುಟ್ನೂರ್ ಎಂಬ ಪುಟ್ಟ ಹಳ್ಳಿ ಇವನ ಸ್ವಂತ ಊರು. ಬಡ ರೈತನ ಮಗನಾಗಿ ಜನಿಸಿದ ಇವನಿಗೆ ಶಿಕ್ಷಣ ಸಿಗಲಿಲ್ಲ. ಒಮ್ಮೆ ಈತನಿಗೆ ಆರೋಗ್ಯ ಸರಿಯಿರಲಿಲ್ಲ. ಆ ಬಳಿಕ ಈತ ಅಸಾಧಾರಣ ಎತ್ತರಕ್ಕೆ ಬೆಳೆಯಲು ಆರಂಭಿಸಿದ. ಆಗಿನ್ನೂ ಈತನಿಗೆ ಹನ್ನೊಂದು ವರ್ಷ. ಆಗಲೇ ಈತ 7.6 ಇಂಚು ಬೆಳೆದಿದ್ದ! ಸರ್ಕಾರಿ ಆಸ್ಪತ್ರೆಯ ವೈದ್ಯರು 'ಸರ್ಜರಿ ಮಾಡಿ ಎತ್ತರ ನಿಲ್ಲಿಸೋಣ' ಎಂಬ ಸಲಹೆ ನೀಡಿದ್ದರಂತೆ. ಅದರಂತೆಯೇ ಅಪರೇಷನ್ ಮಾಡಿಸಿಕೊಂಡ ಬಳಿಕ ಎತ್ತರದ ಬೆಳವಣಿಗೆ ನಿಂತಿದೆ.

ಈ ಬೆಳವಣಿಗೆಯಿಂದ ಸಾಕಷ್ಟು ಅಡ್ಡ ಪರಿಣಾಮವೂ ಆಗಿದೆ. ಕಾಲು ಅಸಮವಾದ ಹಿನ್ನೆಲೆಯಲ್ಲಿ ಈತನ ಒಂದು ಕಾಲನ್ನು ಕತ್ತರಿಸಲಾಗಿದೆ. 'ಪೋಲಿಯೋದಿಂದ ಯಾವ ಪರಿಣಾಮಗಳಾಗುತ್ತವೋ ಅದನ್ನು ನಾನು ಎದುರಿಸುತ್ತಿದ್ದೇನೆ' ಎನ್ನುತ್ತಾನೆ ಇವನು. 'ಇಷ್ಟು ಎತ್ತರ ಇದ್ದೀರಲ್ಲ, ಬಾಸ್ಕೆಟ್ ಬಾಲ್ ಆಟಗಾರ ಆಗಬಹುದಿತ್ತಲ್ಲ?' ಎಂಬ ಪ್ರಶ್ನೆಗೆ, 'ನನಗೆ ಆ ಬಯಕೆ ಇರಲಿಲ್ಲ. ಅಲ್ಲದೆ ಕಾಲು ಸರಿಯಿರದ ಕಾರಣ ಓಡಲು ಆಗುತ್ತಿರಲಿಲ್ಲ' ಎನ್ನುವುದು ಈತನ ಉತ್ತರ.

"ನನಗೆ ಸಹಾಯ ಮಾಡುವಂತೆ ಸರ್ಕಾರಿ ಅಧಿಕಾರಿಗಳು ಮತ್ತು ರಾಜಕಾರಣಿಗಳನ್ನು ಭೇಟಿ ಮಾಡುತ್ತಲೇ ಇದ್ದೆ. ಯಾವುದೂ ಫಲ ನೀಡಲಿಲ್ಲ. ಆದರೂ ವಿಶ್ವಾಸ ಕಳೆದುಕೊಳ್ಳದೇ ಒಮ್ಮೆ ಆಗಿನ ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್.ರಾಜಶೇಖರ ರೆಡ್ಡಿಯವರನ್ನು ಭೇಟಿಯಾದೆ. ಅವರಿಂದಾಗಿ ಜೀವನದಲ್ಲಿ ಹೊಸ ಬೆಳಕು ಮೂಡಿದೆ. ಅವರ ಸಹಾಯದಿಂದ ಪ್ರವಾಸೋದ್ಯಮ ಇಲಾಖೆಯಲ್ಲಿ ಕೆಲಸ ದೊರಕಿತು" ಎನ್ನುತ್ತಾನೆ ಈತ.

ಶ್ರೀ ಗುರುದೇವ ಚಾರಿಟೇಬಲ್ ಟ್ರಸ್ಟ್ ಈತನಿಗೆ ತಿಂಗಳಿಗೆ 500 ರೂಪಾಯಿ ಪಿಂಚಣಿಯನ್ನು ನೀಡುತ್ತಿದೆ. ಅಲ್ಲದೆ ಕೃತಕ ಕಾಲನ್ನು ವಿಶೇಷವಾಗಿ ತಯಾರಿಸಿ ಈತನಿಗೆ ದಾನವಾಗಿ ನೀಡಿದೆ.

ಈ ಲಂಬೂಜಿ ಈ ಮ್ಯೂಸಿಯಂಗೆ ಬರುವ ಪ್ರವಾಸಿಗರ ಮುಖ್ಯ ಆಕರ್ಷಣೆ. "ನನ್ನನ್ನು ಕಂಡರೆ ಜನ ಸಂತೋಷ ಪಡುತ್ತಾರೆ. ಮಕ್ಕಳಿಗಂತೂ ಬಲು ಪ್ರೀತಿ. ಇಲ್ಲಿಗೆ ಬರುವ ಜನರಿಗೆ ಮನೋರಂಜನೆ ನೀಡುವುದೇ ನನಗೊಂದು ಸಂಭ್ರಮ" ಎನ್ನುತ್ತಾ ಜನರ ಸಂತೋಷದಲ್ಲೇ ಈತ ತೃಪ್ತಿ ಕಾಣುತ್ತಿದ್ದಾನೆ.

■ ವಿದ್ಯಾಶ್ರೀ ಎಸ್

